**ಕರ್ನಾಟಕ ಸರ್ಕಾರ**

**ಕಂದಾಯ ಇಲಾಖೆ**

**ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ದಂಡಾಧಿಕಾರಿಗಳ ಕಾರ್ಯಾಲಯ, ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ**

---

## "ಪತ್ರಿಕಾ ಪ್ರಕಟಣೆ"

ರಾಜ್ಯದಲ್ಲಿ ಕೋವಿಡ್-19 ಕೊರೋನಾ ಸೋಂಕು ವ್ಯಾಪಕವಾಗಿ ಹರಡುತ್ತಿರುವ ಹಿನ್ನಲೆಯಲ್ಲಿ ಕೇಂದ್ರ/ರಾಜ್ಯ ಸರ್ಕಾರವು ಅನೇಕ ಎಸ್.ಓ.ಪಿ/ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಲು ನಿರ್ದೇಶಿಸಿದ್ದು, ಅದರನ್ವಯ ಚಿತ್ರದುರ್ಗ ಜಿಲ್ಲೆಯಲ್ಲಿ ಈಗಾಗಲೇ ಎಲ್ಲಾ ನಿರ್ದೇಶನಗಳನ್ನು ಪಾಲಿಸಲು/ಅನುಷ್ಠಾನಗೊಳಿಸಲು ಸೂಕ್ತ ಕ್ರಮಗಳನ್ನು ಕೈಗೊಂಡಿರುತ್ತದೆ. ಆದರೆ ದಿನೇ ದಿನೇ ಜಿಲ್ಲೆಯಲ್ಲಿ ಕೊರೋನಾ ಸೋಂಕು ವ್ಯಾಪಕವಾಗಿ ಹರಡುತ್ತಿರುವುದರಿಂದ, ಮತ್ತಷ್ಟು ಮುನ್ನೆಚ್ಚರಿಕಾ ಕ್ರಮವಾಗಿ, ಸಾರ್ವಜನಿಕರಲ್ಲಿ ಈ ಕೆಳಕಂಡ ನಿರ್ದೇಶನಗಳನ್ನು ಕಟ್ಟುನಿಟ್ಟಾಗಿ ಪಾಲಿಸಲು ಕೋರಿದೆ.

- ಪೂರ್ವ ನಿಯೋಜಿತ/ವ್ಯವಸ್ಥಿತ ಮದುವೆಗಳಲ್ಲಿ ಕೇವಲ 5-10 ಜನ ಮಾತ್ರ ಪಾಲ್ಗೊಳ್ಳುವುದು.
- ಅಂತ್ಯಕ್ರಿಯೆ/ಮರಣ ಸಂಭವಿಸಿದಾಗ ಕೇವಲ 5-10 ಜನ ಮಾತ್ರ ಪಾಲ್ಗೊಳ್ಳುವುದು.
- ಜನ್ಮ ದಿನಾಚರಣೆ ಹಾಗೂ ಇತರೆ ಯಾವುದೇ ಸಮಾರಂಭಗಳನ್ನು ಆಯೋಜಿಸದಿರುವುದು.
- ಅಗತ್ಯ/ಅತ್ಯವಶ್ಯಕ ಸೇವೆಗಳನ್ನು ಪಡೆಯಲು ಮಾತ್ರ ಮನೆಯಿಂದ ಹೊರಗಡೆ ಬರುವುದು.
- ಅನಾವಶ್ಯಕವಾಗಿ ಮನೆಯಿಂದ ಹೊರಗಡೆ ಪ್ರಯಾಣ ಮಾಡಬಾರದು.

ಜಿಲ್ಲಾಧಿಕಾರಿಗಳು,
ಚಿತ್ರದುರ್ಗ ಜಿಲ್ಲೆ

ಗೆ,

ವಾರ್ತಾಧಿಕಾರಿಗಳು, ಜಿಲ್ಲಾ ವಾರ್ತಾ ಇಲಾಖೆ, ಚಿತ್ರದುರ್ಗ ಇವರಿಗೆ ಪತ್ರಿಕೆಯಲ್ಲಿ ಮತ್ತು ಆಕಾಶವಾಣಿಯಲ್ಲಿ ಉಚಿತವಾಗಿ ಪ್ರಕಟಿಸಲು ಕೋರಿದೆ.